**C**

**CCE PR REVISED**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಜೂನ್, 2018**

**S.S.L.C. EXAMINATION, JUNE, 2018**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 26. 06. 2018 ] **ಸಂಕೇತ ಸಂಖ್ಯೆ : 33-K**

Date : 26. 06. 2018 ] **CODE NO. : 33-K**

# ವಿಷಯ : ದ್ವಿತೀಯ ಭಾಷೆ — ಕನ್ನಡ

# Subject : Second Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

**[ ಗರಿಷ್ಠ ಅಂಕಗಳು : 100**

**[ Max. Marks : 100**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಎ'** | |
| | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ :**<br>(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) | 14 × 1 = 14 |
| 1. | ಗಿಳಿಯನ್ನು ಕಂಡ ಇಂದ್ರನಿಗೆ ಆಶ್ಚರ್ಯವಾದದ್ದು ಏಕೆ ?<br>***ಉತ್ತರ :***<br>ಮರ ಒಣಗಿ ಹೋಗಿದ್ದರೂ ಗಿಳಿಯು ಆ ಮರವನ್ನು ಬಿಟ್ಟು ಹೋಗದೆ ಅಲ್ಲಿಯೇ ವಾಸ ಮಾಡುತ್ತಿದ್ದುದನ್ನು ಕಂಡು ಇಂದ್ರನಿಗೆ ಆಶ್ಚರ್ಯವಾಯಿತು. | |
| 2. | ಈ ನಾಡಿನ ಬೆನ್ನೆಲುಬು ಯಾರು ?<br>***ಉತ್ತರ :***<br>ಈ ನಾಡಿನ ಬೆನ್ನೆಲುಬು ರೈತ ಅಥವಾ ಕೃಷಿಕ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 3. | ಸಸ್ತನಿಗಳ ಆಶ್ರಯದಾಣಗಳು ಯಾವುವು ?<br>***ಉತ್ತರ :***<br>ಸಸ್ತನಿಗಳ ಆಶ್ರಯದಾಣಗಳು ಗುಹೆ, ಪೊಟರೆ, ಗೂಡು, ಬಿಲ ಮೊದಲಾದವುಗಳು. | |
| 4. | ಹೆಡ್ ಮಾಸ್ತರರು ಸಂತೋಷಗೊಂಡದು ಏಕೆ ?<br>***ಉತ್ತರ :***<br>ಹೆಡ್ ಮಾಸ್ತರರು ತಮ್ಮನ್ನು ನೋಡಲು ಬಂದ ಹಳೆಯ ವಿದ್ಯಾರ್ಥಿಗಳನ್ನು ಕಂಡು ಸಂತೋಷಗೊಂಡರು. | |
| 5. | ಲಂಡನ್ ಭೂ ವಿಸ್ತೀರ್ಣ ಎಷ್ಟು ?<br>***ಉತ್ತರ :***<br>ಲಂಡನ್ ಭೂ ವಿಸ್ತೀರ್ಣ 610 ಚದುರ ಮೈಲು | |
| 6. | ಲಂಡನ್‌ನಲ್ಲಿರುವ ಪ್ರಸಿದ್ಧ ವಿಶ್ವವಿದ್ಯಾಲಯಗಳು ಯಾವುದು ?<br>***ಉತ್ತರ :***<br>ಕೇಂಬ್ರಿಡ್ಜ್ ಮತ್ತು ಆಕ್ಸ್‌ಫರ್ಡ್ ಲಂಡನ್‌ನಲ್ಲಿರುವ ಪ್ರಸಿದ್ಧ ವಿಶ್ವವಿದ್ಯಾಲಯಗಳು. | |
| 7. | ಗೋಪಾಲನ ಬೆಳಗಿನ ಮುಖ್ಯ ಕೆಲಸ ಯಾವುದಾಗಿತ್ತು ?<br>***ಉತ್ತರ :***<br>ಗೋಪಾಲನ ಬೆಳಗಿನ ಮುಖ್ಯ ಕೆಲಸವೆಂದರೆ ಸ್ನಾನ ಮಾಡಿ ದೇವರ ಪೂಜೆಗೆ ಬೇಕಾದ ಹೂಗಳನ್ನು ಕೊಯ್ದು ತರುವುದು. | |
| 8. | ಬನದ ಗೋಪಾಲ ಯಾರು ?<br>***ಉತ್ತರ :***<br>ಬನದ ಗೋಪಾಲ ಶ್ರೀಕೃಷ್ಣ. | |
| 9. | ಸಿದ್ಧಾರ್ಥನು ಕಾಡಿನಿಂದ ನಾಡಿನತ್ತ ಏಕೆ ಹೊರಟನು ?<br>***ಉತ್ತರ :***<br>ಸಿದ್ಧಾರ್ಥನು ಜನರ ಪ್ರೀತಿಯನ್ನು ಹುಡುಕಿಕೊಂಡು ಕಾಡಿನಿಂದ ನಾಡಿನತ್ತ ಹೊರಟನು. | |
| 10. | ಕಾಡನ್ನು ಅಲೆದ ಸಿದ್ಧಾರ್ಥನಿಗೆ ಹೊಳೆದುದ್ದೇನು ?<br>***ಉತ್ತರ :***<br>ಕಾಡನ್ನು ಅಲೆದ ಸಿದ್ಧಾರ್ಥನಿಗೆ ನಾಡಿನರ್ಥ ಹೊಳೆಯಿತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 11. | ನಮ್ಮ ಕರ್ತವ್ಯಗಳನ್ನು ಹೇಗೆ ಮುಗಿಸಬೇಕೆಂದು ಕವಿ ಹೇಳಿದ್ದಾರೆ ?<br>***ಉತ್ತರ :***<br>ಶಾಂತಿಯಲಿ ಬದುಕಿ ನಮ್ಮ ಕರ್ತವ್ಯಗಳನ್ನು ಮುಗಿಸಬೇಕೆಂದು ಕವಿ ಹೇಳಿದ್ದಾರೆ. | |
| 12. | ಮನಸ್ಸು ಅಳಿಯಾಸೆಗಳ ಸುಳಿಗೆ ಸಿಲುಕಬಾರದು ಏಕೆ ?<br>***ಉತ್ತರ :***<br>ಮನಸ್ಸು ಅಳಿಯಾಸೆಗಳ ಸುಳಿಗೆ ಸಿಲುಕಬಾರದು ಏಕೆಂದರೆ, ಮನುಷ್ಯನ ಜೀವನವು ನಿರ್ದಿಷ್ಟವಾದ ಗುರಿಯನ್ನು ತಲುಪಲು ಸಾಧ್ಯವಾಗದೆ ತೊಳಲುವಂತಾಗುತ್ತದೆ. | |
| 13. | ಕುಣಿಗಲ್ ಕೆರೆಯು ಯಾವ ದಿಕ್ಕಿನಲ್ಲಿದೆ ?<br>***ಉತ್ತರ :***<br>ಕುಣಿಗಲ್ ಕೆರೆಯು ಮೂಡಲ ದಿಕ್ಕಿನಲ್ಲಿದೆ. | |
| 14. | ಧನವಿದ್ದವರಲ್ಲಿ ಇರಬೇಕಾದ ಗುಣ ಯಾವುದು ?<br>***ಉತ್ತರ :***<br>ಧನವಿದ್ದವರಲ್ಲಿ ದಯಗುಣವಿರಬೇಕು. | |
| | **ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು :**<br>(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕಗಳು) | $15 \times 2 = 30$ |
| 15. | ಮರವನ್ನು ಬಿಟ್ಟುಹೋಗದೆ ಇರಲು ಗಿಳಿಯು ನೀಡಿದ ಸಮರ್ಥನೆ ಏನು ?<br>***ಉತ್ತರ :***<br>ಹಲವಾರು ವರ್ಷದಿಂದ ಈ ಮರ ನನಗೆ ಆಶ್ರಯ ಕೊಟ್ಟಿದೆ, ಹಣ್ಣು ಕೊಟ್ಟಿದೆ. ಹಸಿರು ಬಣ್ಣದಿಂದ ಮನಸ್ಸಿಗೆ ಮುದ ನೀಡಿದೆ, ನೆರಳು ನೀಡಿದೆ. ಆದರೆ ಈಗ ದುರದೃಷ್ಟದಿಂದ ಅದನ್ನು ರೋಗ, ಬಡತನಗಳು ಕಿತ್ತುತಿನ್ನುತ್ತಿವೆ. ಹಾಗೆಂದು ಈ ಸ್ಥಿತಿಯಲ್ಲಿ ನಾನು ಅದನ್ನು ಕೈಬಿಟ್ಟು ಬೇರೆ ಕಡೆ ಹೋಗಿ ಆ ಮರಕ್ಕೆ ಕೃತಘ್ನನಾಗಲೆ ? ನಾನು ಎಲ್ಲೋ ಹೋಗಿ ಆಹಾರವನ್ನು ಸಂಪಾದಿಸಿಕೊಂಡು ಬರುತ್ತೇನೆ. ಆದರ ವಾಸ ಮಾತ್ರ ಇಲ್ಲೆ. ಸುಖ ಸಂಪತ್ತಿನ ಕಾಲದಲ್ಲಿ ಜತೆಗಿದ್ದವರು ದುರ್ಭರ ಗಳಿಗೆಯಲ್ಲಿ ಕೂಡ ಅವರ ಜೊತೆಗೇ ಇದ್ದು ಉಪಕಾರ ಸ್ಮರಣೆ ಮಾಡಬೇಕು ಅದಕ್ಕೂ ಒಳ್ಳೆಯ ದಿನ ಬರಲಿ ಎಂದು ಗಿಳಿಯು ಸಮರ್ಥನೆಯನ್ನು ನೀಡಿತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 16. | ಬಾಲಕ ಪುಟ್ಟಯ್ಯ ಪಂಚಾಕ್ಷರಿ ಗವಾಯಿಗಳ ಶಿಷ್ಯನಾದುದು ಹೇಗೆ ?<br>***ಉತ್ತರ :***<br>ಸಂಗೀತ ಲೋಕದ ಜಗದ್ಗುರು ಪಂಡಿತ ಪಂಚಾಕ್ಷರ ಗವಾಯಿಗಳ ಸಂಚಾರಿ ಸಂಗೀತ ಪಾಠಶಾಲೆ ಒಮ್ಮೆ ಗವಿ ಮಠದಲ್ಲಿ ವಾಸ ಮಾಡಿತ್ತು. ಅಲ್ಲಿಗೆ ಮಾವನವರೊಂದಿಗೆ ಪುಟ್ಟಯ್ಯನು ಬಂದು ಗುರುಗಳಾದ ಪಂಚಾಕ್ಷರ ಗವಾಯಿಗಳ ಶಿಷ್ಯತ್ವ ಸ್ವೀಕರಿಸಿ ಪ್ರೀತಿಯ ಶಿಷ್ಯರೆಲ್ಲರಲ್ಲಿ ಒಬ್ಬರಾದರು. | |
| 17. | ಬಾಲಕ ಪುಟ್ಟಯ್ಯ ಕಣ್ಣುಗಳನ್ನು ಕಳೆದುಕೊಂಡದ್ದು ಹೇಗೆ ?<br>***ಉತ್ತರ :***<br>ಬಾಲಕ ಪುಟ್ಟಯ್ಯನವರಿಗೆ ಆರು ತಿಂಗಳಿರುವಾಗ ಕಣ್ಣು ನೋವು ಕಾಣಿಸಿಕೊಂಡಿತು. ಅದಕ್ಕೆ ಅರೀ ಅಂತ ಕರಿಯುತ್ತಾರೆ. ಆವಾಗ ಬರೀ ನಾಟೀ ವೈದ್ಯ ಇತ್ತು. ಅವರು ಕಣ್ಣುಗುಡ್ಡಿಗೆ ತೊನಸಿ ಮುಟ್ಟಿಸಬೇಕು ಅಂತ ಹೇಳಿದ್ದರು. ಆಗ ಮುಟ್ಟಿಸುವಾಗ ತೊನಸಿ ಕೈಜಾರಿ ಕಣ್ಣು ಒಳಗೆ ಬಿದ್ದು ಬಿಟ್ಟವು. ಆವಾಗ ಅದು ಅರಿ ಹರಿಯುವುದರ ಬದಲು ಗುಡ್ಡಿನ ಹರಿದು ಕಣ್ಣು ಹೋಗಿ ಬಿಟ್ಟವು. ಹೀಗೆ ಬಾಲಕ ಪುಟ್ಟಯ್ಯ ಕಣ್ಣುಗಳನ್ನು ಕಳೆದುಕೊಂಡರು. | |
| 18. | ಪುಟ್ಟರಾಜ ಗವಾಯಿಗಳು ಯಾವ ಯಾವ ವಿದ್ಯೆಗಳಲ್ಲಿ ನಿಷ್ಣಾತರಾದರು ?<br>***ಉತ್ತರ :***<br>ಪುಟ್ಟರಾಜ ಗವಾಯಿಗಳು ಪಾಣಿನಿಯ 'ಅಷ್ಟಾಧ್ಯಾಯಿ', ಶರ್ವವರ್ಮನ 'ಕಾತಂತ್ರ', ಕೇಶಿರಾಜನ 'ಶಬ್ದಮಣಿದರ್ಪಣ', ನಿಜಗುಣ ಶಿವಯೋಗಿಗಳ 'ಕೈವಲ್ಯ ಪದ್ಧತಿ' ಜೊತೆಗೆ ತರ್ಕಶಾಸ್ತ್ರ, ನ್ಯಾಯಶಾಸ್ತ್ರ, ಶಬ್ಧಾನುಶಾಸ್ತ್ರ, ಛಂದಶ್ಶಾಸ್ತ್ರ ಹಾಗೂ ಕನ್ನಡ ವ್ಯಾಕರಣವನ್ನು ಶಾಸ್ತ್ರಬದ್ಧವಾಗಿ ಕಲಿತರು. ಕೇವಲ ಕಲಿಯಲಿಲ್ಲ ಅವುಗಳಲ್ಲಿ ನಿಷ್ಣಾತರಾದರು. | |
| 19. | ಹಕ್ಕಿಗೂಡಿನ ವಿಶೇಷತೆಗಳಾವುವು ?<br>***ಉತ್ತರ :***<br>ಹಕ್ಕಿಗಳಷ್ಟು ಕೌಶಲ್ಯದಿಂದ ಗೂಡುಕಟ್ಟುವ ಚಾಕಚಕ್ಯತೆ, ಬೇರಾವುದಕ್ಕೂ ಬಾರದು. ಇಲ್ಲಿ ವಾಸ್ತುಶಿಲ್ಪಿಯ ಕಲ್ಪನೆ ಸಾಕಾರಗೊಳ್ಳುತ್ತದೆ. ಅನೇಕ ವಸ್ತುಗಳನ್ನು ಸಮನ್ವಯಗೊಳಿಸಿ ಮನೆ ನಿರ್ಮಿಸುವ ಮನುಷ್ಯನ ಜಾಣ್ಮೆಯೂ ಕೆಲವೊಮ್ಮೆ ಈ ಚೋಟುದ್ದ ಹಕ್ಕಿಗಳ ಮುಂದೆ ನಾಚುತ್ತದೆ. ಅವು ಸಿಮೆಂಟ್‌ಗಾರೆಯಂಥ ವಸ್ತುಗಳಿಗಿಂತಲೂ ಭಿನ್ನವಾದ ವಸ್ತುವನ್ನು ಬಳಸಬಲ್ಲವು ಒಳಗಡೆಯ ಗೋಡೆಯನ್ನು ಪ್ಲಾಸ್ಟರ್ ಮಾಡಬಲ್ಲವು. ಗೂಡನ್ನು ಅಂದಗೊಳಿಸುವ ಸೌಂದರ್ಯ ಪ್ರಜ್ಞೆಯೂ ಅವಕ್ಕಿದೆ. ಇವು ಹಕ್ಕಿ ಗೂಡಿನ ವಿಶೇಷತೆಗಳಾಗಿವೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 20. | ಹಕ್ಕಿಗಳು ಗೂಡನ್ನು ಎಲ್ಲೆಲ್ಲಿ ಕಟ್ಟಬಲ್ಲವು ?<br>*ಉತ್ತರ :*<br>ಗೂಡು ಕಟ್ಟುವಷ್ಟೇ ಅದನ್ನು ಕಟ್ಟುವ ಸ್ಥಳದ ಆಯ್ಕೆ ಹಕ್ಕಿಯ ಬದುಕಿನಲ್ಲಿ ಮಹತ್ವದ ಪಾತ್ರವಹಿಸುತ್ತದೆ. ನಭದಲ್ಲಿ ಹಾರಿ. ಪರ್ವತಗಳನ್ನು ಏರಿ, ಸಾಗರ, ದ್ವೀಪಗಳನ್ನು ದಾಟುವ ಹಕ್ಕಿಗಳು ತಮಗಿರುವ ಅಪೂರ್ವ ಹಾರಾಟ ಶಕ್ತಿಯಿಂದ ಎಲ್ಲೆಂದರಲ್ಲಿ ಗೂಡು ನಿರ್ಮಿಸಬಹುದಾದ ಅನಂತ ಅವಕಾಶಗಳನ್ನು ಪಡೆದಿವೆ. ಸಾಗರದ ದ್ವೀಪ, ಗಿರಿ ಶಿಖರದನೆತ್ತಿ, ಮನುಷ್ಯನುಸುಳಲಾರದ ನಿಬಿಡ ವನಶ್ರೇಣಿ. ಸೂರ್ಯನ ಬೆಳಕಿಗೂ ಪ್ರವೇಶ ನಿರಾಕರಿಸುವ ಕಗ್ಗತ್ತಲ ಕಣಿವೆ, ರಕ್ತ ಹೆಪ್ಪುಗಟ್ಟಿಸುವ ಶೀತಲ ಧ್ರುವ ಪ್ರದೇಶ ಹೀಗೆ ಎಲ್ಲೆಲ್ಲೂ ಅವು ಗೂಡು ಕಟ್ಟಬಲ್ಲವು. | |
| 21. | ಭಗವಂತ ಕೊಟ್ಟ ಈ ಬದುಕನ್ನು ಯಾವ ರೀತಿ ನಡೆಸಬೇಕೆಂದು ಗುರುಗಳು ಹೇಳಿದರು ?<br>*ಉತ್ತರ :*<br>ಭಗವಂತ ನಮಗೆ ಜೀವನ ಎನ್ನುವ ಕಾಫೀ ಕೊಟ್ಟಿದ್ದಾನೆ. ಅವನು ಕೊಡುವುದು ಈ ಕಾಫೀ ಮಾತ್ರ ಕಪ್ಪುಗಳನ್ನಲ್ಲ ಅವನ್ನೆಲ್ಲ ನಾವು ಮಾಡಿಕೊಂಡಿದ್ದೇವೆ. ಭಗವಂತ ಕೊಟ್ಟ ಈ ಜೀವನವನ್ನು ಆಸ್ವಾದಿಸಿ, ಅಲಂಕಾರಗಳ ಬೆನ್ನತ್ತಿ ಓಡಿಓಡಿ ಜೀವನವನ್ನು ಮರೆಯಬೇಡಿ. ಸಂತೋಷವಾಗಿರುವವರಿಗೆ ಜೀವನದಲ್ಲಿ ಎಲ್ಲವೂ ಚೆನ್ನಾಗಿರುವುದು ಸಿಕ್ಕಿರಲಿಕ್ಕಿಲ್ಲ ಆದರೆ ಸಿಕ್ಕಿರುವುದನ್ನು ಹೇಗ ಚೆನ್ನಾಗಿ ಆಸ್ವಾದಿಸಬೇಕು ಎನ್ನುವುದು ಗೊತ್ತಿದೆ. ಕಪ್ಪುಗಳ ಚಿಂತೆ ಬೇಡ, ಕಾಫೀ ಆಸ್ವಾದಿಸಿ ಎಂದು ಗುರುಗಳು ಹೇಳಿದರು. | |
| 22. | ಸಿದ್ಧಾರ್ಥ ಬುದ್ಧನಾದ ಸಂದರ್ಭದಲ್ಲಿ ಕಾಡಿನ ತುಂಬ ಪ್ರೀತಿ ಹೇಗೆ ತುಂಬಿಕೊಂಡಿತು ?<br>*ಉತ್ತರ :*<br>ಸಿದ್ಧಾರ್ಥ ಬುದ್ಧನಾದ ಸಂದರ್ಭದಲ್ಲಿ ಕಾಡಿನ ತುಂಬ ಮರವನ್ನು ಬಳ್ಳಿ ಅಪ್ಪಿಕೊಂಡು ಬಳ್ಳಿಯಲ್ಲಿ ಹೂವು ಅರಳಿತು. ಹಕ್ಕಿಯು ಮರಿಗೆ ಗುಟುಕು ಕೊಟ್ಟು ಹಾರಿತು. ಹುತ್ತದಿಂದ ಇರುವೆಗಳು ಸಾಲಾಗಿ ಹೊರಟವು. ಆಕಾಶದಲ್ಲಿ ಬೆಳ್ಳಕ್ಕಿಗಳು ಹಿಂಡಾಗಿ ಹಾರಾಡಲು ಆರಂಭಿಸಿದವು ಹೀಗೆ ಪ್ರೀತಿ ತುಂಬಿಕೊಂಡಿತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 23. | ಮಾನವನ ಬದುಕು ಕರ್ಪೂರದಂತೆ ಇರಬೇಕು ಏಕೆ ?<br>***ಉತ್ತರ :***<br>ಪ್ರಕೃತಿಯು ಯಾವುದೇ ಸದ್ದುಗದ್ದಲವಿಲ್ಲದೆ ತನ್ನೆಲ್ಲಾ ಕಾರ್ಯ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗುತ್ತಲೇ ಇರುತ್ತದೆ. ಆಕಾಶದಲ್ಲಿ ನಕ್ಷತ್ರಗಳು ಮಿನುಗುತ್ತಿರುವುದು. ಕಾಮನಬಿಲ್ಲು ಗೋಚರವಾಗುವುದು ಪುಷ್ಪವು ಅರಳಿ ಪರಿಮಳ ಸೂಸುವುದು, ಕಾಯಿಗಳು ಮಾಗಿ ರಸಭರಿತ ಹಣ್ಣು ಆಗುವುದು. ಇಂತಹ ನೂರಾರು ಅದ್ಭುತ ರಮ್ಯಗಳು ಪ್ರಕೃತಿಯಲ್ಲಿ ನಿತ್ಯನಿರಂತರವಾಗಿರುತ್ತವೆ. ಅವು ಎಂದಿಗೂ ತಮ್ಮ ಕಾರ್ಯದ ಬಗ್ಗೆ ಹೇಳಿಕೊಂಡಿದ್ದಿಲ್ಲ. ತಟ್ಟೆಯಲ್ಲಿರುವ ಕರ್ಪೂರವು ಮೌನವಾಗಿ ಕರಗುತ್ತದೆ. ಆದರೆ ಮಾನವ ಸಣ್ಣ ಕೆಲಸವನ್ನೂ ದೊಡ್ಡದಾಗಿ ತನ್ನಿಂದಲೇ ಎಂದು ಪ್ರಚಾರ ಮಾಡಿಕೊಳ್ಳುತ್ತಾನೆ. ಇದರಿಂದ ಏನೂ ಲಾಭವಿಲ್ಲ. ಹೀಗಾಗಿ ಮಾನವನು ಬದುಕಿನಲ್ಲಿ ಕರ್ಪೂರದಂತೆ ತನ್ನ ಅಹಂ ತೊರೆದು ಶಾಂತಿ, ಸಹನೆ ಪ್ರೀತಿಗಳಿಂದ ಕರ್ತವ್ಯವನ್ನು ಮೌನವಾಗಿ ಮಾಡಿ ಮುಗಿಸಬೇಕು ಎಂದು ಕವಿ ಹೇಳಿದ್ದಾರೆ. | |
| 24. | ಕುಣಿಗಲ್ ಕೆರೆಯ ಬಾಳೆಮೀನುಗಳು ಬೊಬ್ಬೆ ಹೊಡೆಯಲು ಕಾರಣವೇನು ?<br>***ಉತ್ತರ :***<br>ಕೃಷಿಕರ ಉಪಕಸುಬಾದ ಮೀನುಗಾರಿಕೆ, ಬದುಕಿನ ಊರುಗೋಲು ದೋಣಿ ಸಾಗಲು ಹುಟ್ಟು ಹಾಕಬೇಕು, ಹುಟ್ಟಿನ ಹೊಡೆತಕ್ಕೆ ಸಿಕ್ಕಿದಾಗ ಹಾಗೂ ಮೀನು ಹಿಡಿಯಲು ಬಲೆಯನ್ನು ಬೀಸಿದಾಗ ಬಲೆಯಲ್ಲಿ ಸಿಲುಕಿಕೊಂಡ ಮೀನುಗಳನ್ನು ನೀರಿನಿಂದ ಮೇಲಕ್ಕೆತ್ತಿದಾಗ ವಿಲವಿಲ ಒದ್ದಾಡುತ್ತವೆ ಇದು ಕುಣಿಗಲ್ ಕೆರೆಯ ಬಾಳೆ ಮೀನುಗಳು ಬೊಬ್ಬೆ ಹೊಡೆಯಲು ಕಾರಣವಾಗಿದೆ. | |
| 25. | ಬಸವಣ್ಣನವರು ಜನರ ಧಾರ್ಮಿಕ ನಂಬಿಕೆಗಳನ್ನು ಏಕೆ ಖಂಡಿಸಿದ್ದಾರೆ ?<br>***ಉತ್ತರ :***<br>ಮನುಷ್ಯ ಸಾಮಾನ್ಯವಾಗಿ ನೀರಕಂಡಲ್ಲಿ ಮುಳುಗುತ್ತಾನೆ. ಮರವನ್ನು ಕಂಡಲ್ಲಿ ಸುತ್ತುತ್ತಾನೆ. ಆದರೆ ಬತ್ತುವ ನೀರು, ಒಣಗುವ ಮರ ಶಾಶ್ವತವಾದವಲ್ಲ ಇದನ್ನು ಮೆಚ್ಚಿಕೊಂಡವರಿಗೆ ಕೂಡಲ ಸಂಗಮದೇವನನ್ನು ಕಾಣಲು ಸಾಧ್ಯವಿಲ್ಲ. ಹೀಗಾಗಿ ಬಸವಣ್ಣನವರು ಜನರ ಇಂತಹ ಧಾರ್ಮಿಕ ನಂಬಿಕೆಗಳನ್ನು ಖಂಡಿಸಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 26. | 'ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ' – ಎಂಬ ಅಕ್ಕಮಹಾದೇವಿಯವರ ಮಾತಿನ ಅರ್ಥವೈಶಿಷ್ಟ್ಯವೇನು ? | |
| | ***ಉತ್ತರ :*** | |
| | ಅಕ್ಕ ಮಹಾದೇವಿಯವರು ತಮ್ಮ ವಚನದಲ್ಲಿ ನೆರಳು ಕೊಡದ ಮರವಿದ್ದು ಏನೂ ಪ್ರಯೋಜನವಿಲ್ಲ. ಬೇಕಾದಷ್ಟು ಹಣ ಸಂಪತ್ತು ಶ್ರೀಮಂತಿಕೆ ಇದ್ದರೂ ದಾನ ಕೊಡುವ ದಯಗುಣ ಇಲ್ಲದಿದ್ದರೆ ಏನೂ ಪ್ರಯೋಜನವಿಲ್ಲ. ಹಸುವಿದ್ದು ಹಾಲು ಇಲ್ಲದಿದ್ದರೆ ಏನೂ ಪ್ರಯೋಜನವಿಲ್ಲ. ರೂಪ ಸೌಂದರ್ಯವಿದ್ದರೂ ಗುಣ ಒಳ್ಳೆಯದಾಗಿರದಿದ್ದರೆ ಏನೂ ಪ್ರಯೋಜನವಿಲ್ಲ. ಊಟದ ಬಟ್ಟಲಿದೆ ಅನ್ನವೇ ಇಲ್ಲ ಏನೂ ಪ್ರಯೋಜನವಿಲ್ಲ. ಮನುಷ್ಯನಲ್ಲಿ ಒಳ್ಳೆಯ ಗುಣ ನಡತೆಗಳಿದ್ದರೆ ಮಾತ್ರ ಚೆನ್ನಮಲ್ಲಿಕಾರ್ಜುನನನ್ನು ಕಾಣಲು ಸಾಧ್ಯ ಕೇವಲ ಬಾಹ್ಯ ಸೌಂದರ್ಯದಿಂದ ಸಾಧ್ಯವಿಲ್ಲ ಎಂಬುದು ಈ ಮಾತಿನ ಅರ್ಥ ವೈಶಿಷ್ಟ್ಯವಾಗಿದೆ. | |
| 27. | ಶತ್ರು ಬಲಕೆ ನಮೋ ಎಂದು ಉತ್ತರನು ಏಕೆ ಹೇಳಿದನು ? | |
| | ***ಉತ್ತರ :*** | |
| | ವಿರಾಟನ ಮಗನಾದ ಉತ್ತರಕುಮಾರನು ಕೌರವರ ಸೇನೆಯನ್ನು ಕಂಡು ಕಣ್ಣುಗಳಿಗೆ ಗೋಚರಿಸಲು ಸಾಧ್ಯವಿರುವಷ್ಟು ದೊಡ್ಡ ಸಮುದ್ರದಂತೆ ಕಾಣುವ ಸೈನ್ಯದೊಡನೆ ಹೋರಾಡಿ ಗೆಲ್ಲಲು ಮನ ಒಪ್ಪುತ್ತಿಲ್ಲ. ಈ ದೇಹ ಸದೃಢವಾಗಿದ್ದರೂ ಕೂಡ ಹೆಗ್ಗಳಿಕೆಯ ವಿಶೇಷ ಕಾರ್ಯವನ್ನು ಮಾಡಲು ಸಾಧ್ಯವಾಗುತ್ತಿಲ್ಲ. ಇಂತಹ ದೊಡ್ಡ ಸೈನ್ಯಕ್ಕೆ ಭೂಮಿತಾಯಿಯೇ ಜನ್ಮ ನೀಡಿರುವಳೋ ಇವರೊಡನೆ ಶಿವನಿಗೆ ಮಾತ್ರ ಯುದ್ಧ ಮಾಡಿ ಗೆಲ್ಲಲು ಸಾಧ್ಯ ಉಳಿದವರಿಗೆ ಸಾಧ್ಯವಿಲ್ಲ. ಇಂತಹ ಶತ್ರುಬಲಕೆ ನಮೋ ಎಂದು ಉತ್ತರಕುಮಾರನು ಹೇಳಿದನು. | |
| 28. | ವೈದ್ಯರು ಭೀಮನಾಯಕನ ಮಗುವಿನ ಪ್ರಾಣವನ್ನು ಹೇಗೆ ಉಳಿಸಿದರು ? | |
| | ***ಉತ್ತರ :*** | |
| | ವೈದ್ಯರು ಭೀಮನಾಯಕನ ಮನೆಗೆ ಬಂದು ಮಗುವಿನ ನಾಡಿಯನ್ನು ಹಿಡಿದು ನೋಡಿದರು ಜ್ವರದ ರೀತಿಯನ್ನು ಪರೀಕ್ಷಿಸಿ ಗುರುತಿಸಿಕೊಂಡು ಔಷಧಿಯ ಮಾತ್ರೆಯನ್ನು ಮಗುವಿಗೆ ಕುಡಿಸಿದರು ನಾಲ್ಕೈದು ನಿಮಿಷಗಳಲ್ಲಿಯೇ ಮಗು ಅರೆಗಣ್ಣುಮುಚ್ಚಿ ಮಲಗಿಕೊಂಡಿತು. ವೈದ್ಯರಿಗೆ ಯಾವುದೋ ಸೊಪ್ಪು ಬೇಕಾಯಿತು. ಕತ್ತಲೆಯ ರಾತ್ರಿಯಲ್ಲಿ ಪಂಜಿನವರೊಂದಿಗೆ ಕಾಡಿಗೆ ಹೋಗಿ ಕಲ್ಲು ಎಡಹುತ್ತ ಮುಳ್ಳುಗಳನ್ನು ತುಳಿಯುತ್ತ ಕಾಡಿನ ತುಂಬಾ ಅಡ್ಡಾಡಿದರು. ಬೇಕಾದ ಸೊಪ್ಪು ಕಣ್ಣಿಗೆ ಕಂಡಾಗ ಚಿಕ್ಕ ಮಕ್ಕಳಂತೆ ಕುಣಿದಾಡಿದರು. ಮರಳಿ ಮನೆಗೆ ಬಂದು ತಾವು ತಂದ ಸೊಪ್ಪಿನ ರಸದೊಂದಿಗೆ ಮತ್ತೊಂದು ಸಲ ಔಷಧಿಯನ್ನು ಕುಡಿಸಿದರು. ಕುಪ್ಪಿಯಲ್ಲಿದ್ದ ಒಂದು ಲೇಹವನ್ನು ಹಣೆಯ ತುಂಬ ಬಳಿದರು. ಮಗು ಕಣ್ಣುಮುಚ್ಚಿ ನಿದ್ರೆ ಮಾಡಿತು. ಹೀಗೆ ವೈದ್ಯರು ಭೀಮನಾಯಕನ ಮಗುವಿನ ಪ್ರಾಣವನ್ನು ಉಳಿಸಿದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 29. | ಈ ಲೋಕವು ಯಾವ ರೀತಿ ಸಂತೋಷದಾಯಕವಾಗಿದೆ ಎಂದು ಹೊಂಗೆ ಬೇವುಗಳ ಹಾಡು ಪದ್ಯದಲ್ಲಿ ಹೇಳಲಾಗಿದೆ ? <br><br> ***ಉತ್ತರ :*** <br><br> ಪ್ರಕೃತಿಯಲ್ಲಿ ಬಣ್ಣಬಣ್ಣದ ಚಿಟ್ಟೆಗಳ ಹಾರಾಟ, ದುಂಬಿಗಳ ಝೇಂಕಾರದ ಧ್ವನಿ, ಹೊಂಗೆ ಮರದ ನೆರಳು. ಬಗಬಗೆಯ ಹೂವುಗಳಿಂದ ಕೂಡಿದ ಮರಗಳ ಬುಡದಲ್ಲಿ ಹೂವುಗಳು ಬಿದ್ದು ಹಾಸಿಗೆಯಂತೆ ಕಾಣುತ್ತಿದೆ. ಗಮಗಮಿಸುವ ಪರಿಮಳದ ಅಮಲಿನಲ್ಲಿ ಇಲ್ಲೇ ಎಲ್ಲೋ ನಾಳೆಯೆಂಬ ಕೂಸು ಅಡಗಿ ಕುಳಿತಂತೆ ಕಾಣುತ್ತಿದೆ. ಹೀಗೆ ಈ ಲೋಕವು ಸಂತೋಷದಾಯಕವಾಗಿದೆ. | |
| 30. | **ಪದ್ಯಭಾಗ ಪೂರ್ಣಗೊಳಿಸಿ ಬರೆಯುವುದು :** <br> (ತಪ್ಪಿಲ್ಲದೆ ಬರೆದ ಪೂರ್ಣಸಾಲುಗಳಿಗೆ ಒಟ್ಟಾರೆ ಮೂರು ಅಂಕಗಳು) <br> ಯುಗದ ಹಿಂದಿನ ....................................................... <br> ............................................................................... <br> ............................................................................... <br> ............................................................... ಸವಿಚೈತ್ರವು. <br> ***ಅಥವಾ*** <br> ಕೊರಡ ಕೊನರಿಸಿ .................................................... <br> ............................................................................... <br> ............................................................................... <br> ............................................................... ಮತ್ತೇರಿದೆ. <br> ***ಉತ್ತರ :*** <br> ಯುಗದ ಹಿಂದಿನ ಕೊಳೆಯ ತಿಕ್ಕಿ ಮೈತೊಳೆದಂತೆ <br> ನಗುವ ನಲಿವಿನ ಮುಖವೆ ಎಲ್ಲೆಲ್ಲಿಯೂ <br> ಬೆಲ್ಲಬೇವಿಗೆ ಸೇರಿ ಕಹಿ ಕಳೆದು ಸಿಹಿ ಹೆಚ್ಚಿ <br> ಎಲ್ಲರೆದೆಗಳ ತುಂಬ ಸವಿಚೈತ್ರವು. <br> **ಅಥವಾ** <br> ಕೊರಡ ಕೊನರಿಸಿ ತುದಿಗೆ ಮುಗುಳನಗೆ ಮುತ್ತಿಟ್ಟು <br> ಬರಡು ಜೀವಕೆ ಹೊಸತು ಚೈತನ್ಯವು <br> ಕುಕಿಲ ಕೋಗಿಲೆ ಕಂಠ ಮುಕ್ತ ತಾರಕಕೇರಿ <br> ಚಿಲಿಪಿಲಿಯ ಕಲರವಕೆ ಮತ್ತೇರಿದೆ. | 1 × 3 = 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | 2 × 3 = 6 |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿಗಳು, ಪ್ರಶಸ್ತಿ | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 31. | ಕುವೆಂಪು<br>***ಉತ್ತರ :***<br>ಕನ್ನಡದ ವರ್ಡ್ಸ್‌ವರ್ತ್ ಹಾಗೂ ರಾಷ್ಟ್ರಕವಿ ಎಂದು ಖ್ಯಾತರಾಗಿರುವ ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪರವರು ದಿನಾಂಕ ೨೯–೧೨–೧೯೦೪ ರಂದು ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕು ಕುಪ್ಪಳಿಯಲ್ಲಿ ಜನಿಸಿದರು ಇವರ ಕಾವ್ಯನಾಮ ಕುವೆಂಪು.<br>ಇವರ ಕೃತಿಗಳು 'ಚಂದ್ರಮಂಚಕೆಬಾ ಚಕೋರಿ, ನವಿಲು, ಪಕ್ಷಿಕಾಶಿ (ಕವನ ಸಂಕಲನಗಳು) ಬೆರಳ್‌ಗೆ ಕೊರಳ್, ಶೂದ್ರ ತಪಸ್ವಿ, ಜಲಗಾರ (ನಾಟಕಗಳು), ರಸೋವೈಸಃ, ವಿಭೂತಿ ಪೂಜೆ, ದ್ರೌಪದಿಯ ಸಿರಿಮುಡಿ (ವಿಮರ್ಶೆಗಳು), ನನ್ನ ದೇವರು ಮತ್ತು ಇತರ ಕಥೆಗಳು (ಸಣ್ಣ ಕಥೆ) ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು (ಕಾದಂಬರಿಗಳು) ಶ್ರೀರಾಮಾಯಣದರ್ಶನಂ (ಮಹಾಕಾವ್ಯ) ರಚಿಸಿದ್ದಾರೆ.<br>ಕುವೆಂಪುರವರಿಗೆ ಪದ್ಮಭೂಷಣ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಷ್ಟ್ರಕವಿ ಪುರಸ್ಕಾರ, ಜ್ಞಾನಪೀಠ ಪ್ರಶಸ್ತಿ, ಪಂಪ ಹಾಗೂ ಕರ್ನಾಟಕ ರತ್ನ ಪ್ರಶಸ್ತಿಗಳು ಸಂದಿವೆ. | |
| 32. | ಎಂ. ಗೋಪಾಲಕೃಷ್ಣ ಅಡಿಗ<br>***ಉತ್ತರ :***<br>ಎಂ. ಗೋಪಾಲಕೃಷ್ಣ ಅಡಿಗರವರು ೧೯೧೮ ರಲ್ಲಿ ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಮೊಗೇರಿಯಲ್ಲಿ ಎಂಬಲ್ಲಿ ಜನಿಸಿದರು.<br>ಇವರ ಕೃತಿಗಳು 'ಭಾವತರಂಗ', 'ಚಂಡೆಮದ್ದಳೆ', 'ಭೂಮಿಗೀತ', 'ನಡೆದುಬಂದ ದಾರಿ' ಮೊದಲಾದ ಕವನ ಸಂಕಲನಗಳನ್ನು 'ಅನಾಥೆ', 'ಆಕಾಶದೀಪ' ಎಂಬ ಎರಡು ಕಾದಂಬರಿಗಳನ್ನು ರಚಿಸಿದ್ದಾರೆ.<br>ಅಡಿಗರಿಗೆ ಪಂಪ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇರಳದ ಕುಮಾರನ್ ಆಶಾನ್ ಪ್ರಶಸ್ತಿ, ಮಧ್ಯಪ್ರದೇಶದ ಕಬೀರ್ ಸಮ್ಮಾನ್ ಪ್ರಶಸ್ತಿಗಳು ಲಭಿಸಿವೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಹೇಳಿಕೆಗಳಿಗೆ ಸಂದರ್ಭಸಹಿತ ಸ್ವಾರಸ್ಯ ಬರೆಯುವುದು :** | 4 × 3 = 12 |
| | ಕೃತಿ, ಕರ್ತೃ, ಪಠ್ಯದ ಹೆಸರು | 1 ಅಂಕ |
| | ಯಾರು–ಯಾರಿಗೆ, ಸಂದರ್ಭ | 1 ಅಂಕ |
| | ಭಾಷಾಶೈಲಿ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 33. | "ಇಂಥಾ ಒಣಮರದಲ್ಲಿ ಏಕೆ ವಾಸ ಮಾಡುತ್ತಿದ್ದೀಯ ?"<br>***ಉತ್ತರ :***<br>ಈ ಸಾಲನ್ನು ಅ.ರಾ. ಮಿತ್ರರವರ ಮಹಾಭಾರತ (ವ್ಯಾಸ) ಪಾತ್ರ ಸಂಗತಿಗಳು ಪುಸ್ತಕದಿಂದ ಆರಿಸಲಾದ ಒಣಮರದ ಗಿಳಿ ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಇಂದ್ರನು ಗಿಳಿಗೆ ಕೇಳುತ್ತಾನೆ.<br>ಬೇಡನು ಬಿಟ್ಟ ವಿಷದ ಬಾಣವು ತಾಗಿ ಮರವು ಒಣಗಿ ಹೋಗುತ್ತದೆ. ಅದೇ ಮರದಲ್ಲಿ ವಾಸಿಸುತ್ತಿದ್ದ ಗಿಳಿಯು, ಮರ ಒಣಗಿ ಅದರ ಪುಷ್ಪಸಮೃದ್ಧಿ, ಫಲಸಮೃದ್ಧಿ, ಹಸಿರಿನ ಸಿರಿ ಎಲ್ಲವೂ ಮಾಯವಾದರು ಅಲ್ಲೇ ವಾಸಿಸುತ್ತಿರುತ್ತದೆ. ಇದನ್ನು ನೋಡಿದ ಇಂದ್ರನು ಆಶ್ಚರ್ಯಗೊಂಡು ಗಿಳಿಯನ್ನು ಪ್ರಶ್ನಿಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.<br>ಗಿಳಿಯೊಂದರ ಕೃತಜ್ಞತಾ ಗುಣವನ್ನು ಇಲ್ಲಿ ಕಾಣಬಹುದು. | |
| 34. | ಲಂಡನ್ ಮಲಗಿ ನಿದ್ರಿಸುತ್ತದೆಯೇ ಅನಿಸುತ್ತದೆ.<br>***ಉತ್ತರ :***<br>ಈ ಸಾಲನ್ನು ಡಾ. ಬಸವಪ್ರಭು ಪಾಟೀಲ ಮತ್ತು ಕೆ. ಸಿದ್ಧಯ್ಯಸ್ವಾಮಿಯವರು ಸೇರಿ ಬರೆದ 'ಯೂರೋಪಿನಲ್ಲಿ' ಪ್ರವಾಸ ಸಾಹಿತ್ಯದಿಂದ ಆರಿಸಲಾದ 'ಟುಸ್ಸೋಡ್ ವ್ಯಾಕ್ಸ್ ಮ್ಯೂಸಿಯಂ.' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಲೇಖಕರು ಹೇಳುತ್ತಾರೆ.<br>ಲಂಡನ್ ನಗರದ ಪ್ರಮುಖ ಸ್ಥಳಗಳನ್ನು ವೀಕ್ಷಿಸಿಕೊಂಡು ಲೇಖಕರುಗಳು ಲಂಡನ್ ನಗರದ ಮಧ್ಯದಿಂದ ಹೊರವಲಯದ ಕಡೆಗೆ ಬಂದಂತೆಲ್ಲ ರಸ್ತೆ ಮೇಲೆ ಕಾರುಗಳು, ಅಪರೂಪಕ್ಕೊಮ್ಮೆ ಸೈಕಲ್ ಕಾಣುತ್ತವೆ. ಮನೆ ಮುಂದೆ ಜನಗಳೇ ಇರುವುದಿಲ್ಲ ಎನ್ನುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

ಸೂರ್ಯ ಮುಳುಗದ ದೇಶವೆಂದು ಕರೆಸಿಕೊಳ್ಳುತ್ತಿದ್ದ ಬ್ರಿಟನ್‌ನಲ್ಲಿ ಸೂರ್ಯನು ಮುಳುಗುತ್ತಾನೆ. ಎಂಬುದನ್ನು ತಿಳಿಸಿಕೊಡುವಂತೆ ಲಂಡನ್ ಹೊರವಲಯದ ಮನೆಗಳು ಜನಗಳೇ ಇಲ್ಲದೆ ಮಲಗಿ ನಿದ್ರಿಸುವಂತೆ ಕಾಣುವುದು ಎಂದು ಅರ್ಥಗರ್ಭಿತವಾಗಿ ವರ್ಣಿತವಾಗಿದೆ.

35. "ನಾನೂ ನೋಡುತ್ತೇನೆ ಹೇಗೆ ಇಳಿಯುತ್ತಾರೆಂದು."

***ಉತ್ತರ :***

ಈ ಸಾಲನ್ನು ಸುಕನ್ಯಾ ಮಾರುತಿಯವರ ಸಮಗ್ರ ಕವನ ಸಂಕಲನ ಕೃತಿಯಿಂದ ಆರಿಸಲಾದ 'ಏಣಿ' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಏಣಿ ಹೇಳುತ್ತದೆ.

ಶ್ರಮಿಕರ ಮತ್ತು ಜನಸಾಮಾನ್ಯರ ಸಹಾಯ ಪಡೆದು ಪದವಿ, ಅಧಿಕಾರ, ಕೀರ್ತಿ ಹಣ, ಗೌರವ, ಯಶಸ್ಸು ಪಡೆದು ವ್ಯಕ್ತಿ ಮೇಲೇರುತ್ತಾನೆ. ಹೀಗೆ ಮೇಲೇರಿದವನಿಗೆ ಅಹಂ ತುಂಬಿಕೊಳ್ಳುತ್ತದೆ. ತನ್ನ ಏಳಿಗೆಗೆ ಕಾರಣರಾದವರನ್ನು ಮರೆಯುತ್ತಾನೆ. ತಿರಸ್ಕರಿಸುತ್ತಾನೆ. ಹಣ, ಅಧಿಕಾರ, ಅಂತಸ್ತುಗಳು ಎಂದಿಗೂ ಶಾಶ್ವತವಲ್ಲ ಎಂಬುದನ್ನು ಅರಿತು ತನ್ನ ಏಳಿಗೆಗೆ ಕಾರಣರಾದವರನ್ನು ಗೌರವಿಸದಿದ್ದರೆ ತಮ್ಮ ವಿಪತ್ತಿಗೆ ತಾವೇ ಕಾರಣರಾಗುತ್ತಾರೆ ಎಂಬುದನ್ನು ಏಣಿ ಹೇಳುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

ಏಣಿ ಹಲವು ಆಯಾಮಗಳಲ್ಲಿ ನಮ್ಮ ಕಲ್ಪನೆಯನ್ನು ವಿಸ್ತರಿಸುತ್ತಾ ಹೋಗುತ್ತದೆ. ಮನುಷ್ಯ ಉನ್ನತ ಸ್ಥಾನಕ್ಕೆ ಏರಲು ಸಹಾಯ ಮಾಡಿದವರನ್ನು ಮರೆಯಬಾರದು. ಈ ಬದುಕು ಶಾಶ್ವತವಲ್ಲ ಎಂಬುದು ಇಲ್ಲಿ ಅರ್ಥಗರ್ಭಿತವಾಗಿ ವರ್ಣಿತವಾಗಿದೆ.

36. ದಾಳಿ ಬಂದೊಡನೆ ಶರಣೆಂಬ ಹೆಣ್ತನವು

***ಉತ್ತರ :***

ಈ ಸಾಲನ್ನು ಎಂ. ಗೋಪಾಲಕೃಷ್ಣ ಅಡಿಗರವರ 'ಸಮಗ್ರ ಕಾವ್ಯ'ದಿಂದ ಆರಿಸಲಾದ 'ಗುರಿ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಕವಿಗಳು ಹೇಳುತ್ತಾರೆ.

ಗಾಳಿ ಬೀಸುವ ದಿಕ್ಕಿಗೆ ಹೋಗುವ ರೀತಿಯಲ್ಲಿ ಮನಸ್ಸಿಗೆ ಬಂದಂತೆ ವರ್ತಿಸಿ ಹೇಡಿತನವನ್ನು ಪ್ರದರ್ಶಿಸದೆ ತನ್ನದೆಯಾದ ಸ್ವಂತಿಕೆಯನ್ನು ಬೆಳೆಸಿಕೊಳ್ಳಬೇಕು. ದಾಳಿ

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಬಂದಾಗ ಹೆದರಿ ಓಡಿ ಹೋಗದೆ ಅದನ್ನು ಎದುರಿಸುವ ಧೈರ್ಯವನ್ನು ತೋರಬೇಕು. ಹೆಣ್ಣು ಮಕ್ಕಳಂತೆ ಭಯಪಡದೆ ಪೌರುಷದಿಂದ ಬದುಕನ್ನು ಒಳ್ಳೆಯ ದಾರಿಯಲ್ಲಿ ನಡೆಸಬೇಕೆಂದು ಕವಿಗಳು ಹೇಳುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.<br><br>ಮನುಷ್ಯ ತನ್ನ ಜೀವನದಲ್ಲಿ ಒಂದು ಗುರಿಯನ್ನು ಇಟ್ಟುಕೊಂಡು ಅದರ ಸಾಧನೆಗಾಗಿ ಹಗಲಿರುಳು ಕಷ್ಟಪಟ್ಟು ಧೈರ್ಯವಾಗಿ ಬಾಳ್ವೆ ನಡೆಸಬೇಕು ಎಂಬುದು ಇಲ್ಲಿ ಅರ್ಥಗರ್ಭಿತವಾಗಿ ವರ್ಣಿತವಾಗಿದೆ. | |
| | **ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | $2 \times 4 = 8$ |
| | ವಿಷಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿ, ಪದ ಬಳಕೆಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 37. | ದೇಶದ ಬಜೆಟ್‌ನಲ್ಲಿ ರಕ್ಷಣಾ ಇಲಾಖೆಗೆ ಹೆಚ್ಚಿನ ಹಣವನ್ನು ಏಕೆ ಮೀಸಲಾಗಿಡುತ್ತದೆ ? ವಿವರಿಸಿ.<br><br>***ಅಥವಾ***<br><br>ದೇಶದ ಪ್ರಗತಿಯಲ್ಲಿ ಸಾಹಿತಿಗಳ ಪಾತ್ರವೇನು ಎಂಬುದನ್ನು ಅಸಿ–ಮಸಿ–ಕೃಷಿ ಪಾಠವನ್ನು ಆಧರಿಸಿ ವಿವರಿಸಿ.<br>***ಉತ್ತರ :***<br><br>ಅಸಿ ಎಂದರೆ ಯುದ್ಧ, ಯುದ್ಧ ಎಂದರೆ ಸೈನಿಕರು ಸೈನಿಕ ಬಲ ಇದ್ದಾಗ ದೇಶದ ಸಂರಕ್ಷಣೆ ಸಾಧ್ಯ ಇಲ್ಲದಿದ್ದರೆ ಬೇರೆ ದೇಶದವರು ಸುಲಭವಾಗಿ ನಮ್ಮ ದೇಶದ ಮೇಲೆ ದುರಾಕ್ರಮಣ ಮಾಡಿ ಯುದ್ಧ ಸಾರಿ ನಮ್ಮನ್ನು ತಮ್ಮ ಗುಲಾಮರನ್ನಾಗಿ ಮಾಡಿಕೊಳ್ಳಬಹುದು. ಆದುದರಿಂದ ಈ ದೇಶದ ರಕ್ಷಣೆ ಮಾಡುವವರು ಸೈನಿಕರು. ಅವರು ಪ್ರಬಲರಾಗಿದ್ದಾಗ ದೇಶವನ್ನು ರಕ್ಷಣೆ ಮಾಡಲು ಸಾಧ್ಯ ಇಲ್ಲದಿದ್ದರೆ ಬಲಿಷ್ಠ ದೇಶ ಎಲ್ಲರನ್ನೂ ಹೊಡೆದು ಹಾಕಿ ತಾನೇ ಸೂರ್ಯ ಮುಳುಗದ ಸಾಮ್ರಾಜ್ಯವನ್ನು ಸ್ಥಾಪಿಸಿ ಸರ್ವಾಧಿಕಾರಿಯಂತೆ ಮೆರೆಯಬಹುದು. ಆದುದರಿಂದ ನಮ್ಮ ರಕ್ಷಣಾ ಪಡೆ ತುಂಬಾ ಪ್ರಬಲವಾಗಿರಬೇಕು. ಅದಕ್ಕಾಗಿ ಎಷ್ಟೇ ಖರ್ಚಾದರೂ ಚಿಂತೆ ಇಲ್ಲ ಎನ್ನುವರು ಅದು ಕಾರಣವೋ ಏನೋ ನಮ್ಮ ದೇಶದ ಬಜೆಟ್‌ನಲ್ಲಿ ಹೆಚ್ಚಿನ ಭಾಗ ರಕ್ಷಣ ಇಲಾಖೆಗೆ ಮೀಸಲಾಗಿರುವುದನ್ನು ನೋಡಬಹುದು.<br><br>***ಅಥವಾ*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ರಕ್ಷಣೆಗಿಂತ ಮುಖ್ಯವಾದುದು ಮಸಿ. ಮಸಿ ಎಂದರೆ ಸಾಹಿತ್ಯ ರಚನೆ "ಪೆನ್ನು ಖಡ್ಗಕ್ಕಿಂತ ಹರಿತ" ಎನ್ನುವ ಗಾದೆ ಮಾತೇ ಇದೆ. ಖಡ್ಗದಿಂದ ಸಾಧಿಸಲು ಸಾಧ್ಯವಾಗದ್ದನ್ನು ಪೆನ್ನಿನ ಮೂಲಕ ಸಾಧಿಸಬಹುದು. ಅಂದರೆ ಬರೆವಣಿಗೆ ಅಷ್ಟೊಂದು ಪರಿಣಾಮಕಾರಿಯಾದುದು. ಪತ್ರಿಕೆಯ ಒಂದು ಲೇಖನ, ಕಾದಂಬರಿ, ಕಥೆ, ಕವನ, ಹಲವರ ಬದುಕನ್ನು ಬದಲಾಯಿಸಬಲ್ಲುದು. ಒಂದು ಸರ್ಕಾರ ಉರುಳಿಸಿ ಮತ್ತೊಂದು ಸರ್ಕಾರ ತರಬಹುದು. ಈ ನಿಟ್ಟಿನಲ್ಲಿ ಬರೆವಣಿಗೆ ಹೆಚ್ಚು ಶಕ್ತಿಶಾಲಿಯಾದುದು. ಇವತ್ತು ಸಾಹಿತಿಗಳಿಗೆ ನಾಡಿನಲ್ಲಿ ಅಪಾರ ಗೌರವ ಇರುವುದು ಆ ಸಾಹಿತ್ಯದ ಸತ್ವದಿಂದಾಗಿ ಅಂಥ ಸಾಹಿತಿಗಳು ನಾಡಿನಲ್ಲಿ ಹೆಚ್ಚಿದಷ್ಟು ಸಮಾಜ ಪ್ರಗತಿಯ ಮೆಟ್ಟಿಲು ತುಳಿಯಲು ಸಾಧ್ಯ. ಬಸವಾದಿ ಶಿವ ಶರಣರ ವಚನಗಳು, ದಾಸರ ಕೀರ್ತನಗಳು, ಕುವೆಂಪು ಬೇಂದ್ರೆಯಂಥವರ ಕಾವ್ಯ ಇವತ್ತಿಗೂ ಜನರ ಮೇಲೆ ಸತ್ಪರಿಣಾಮ ಬೀರಲು ಅಲ್ಲಿರುವ ಸತ್ವವೇ ಕಾರಣ ಇದನ್ನು ಗಮನಿಸಿ ಹಿರಿಯರು ದೇಶದ ಸಮೃದ್ಧಿ ಪ್ರಗತಿ ಮಸಿಯನ್ನೂ ಅವಲಂಬಿಸಿದೆ ಎಂದು ಹೇಳಿದ್ದರೆ ಅದರಲ್ಲಿ ಅಂಥ ಉತ್ಪ್ರೇಕ್ಷೆ ಇದೆ ಎಂದೆನಿಸದು. | |
| 38. | ಅರ್ಜುನ ಮತ್ತು ಉತ್ತರ ಕುಮಾರ ಇವರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವರ್ಣನಾತ್ಮಕವಾಗಿ ಬರೆಯಿರಿ. | |
| | ***ಅಥವಾ*** | |
| | ಅರ್ಜುನ ಮತ್ತು ಉತ್ತರ ಕುಮಾರ ಇವರ ಗುಣಸ್ವಭಾವದಲ್ಲಿಯ ವ್ಯತ್ಯಾಸಗಳನ್ನು ಬರೆಯಿರಿ. | |
| | ***ಉತ್ತರ :*** | |
| | ವಿರಾಟನ ಮಗನಾದ ಉತ್ತರಕುಮಾರನು ಕೌರವರ ಸೇನೆಯನ್ನು ನೋಡಿ ಇಷ್ಟು ದೊಡ ಸಮುದ್ರದಂತೆ ಕಾಣುವ ಸೈನ್ಯಕ್ಕೆ ಭೂಮಿ ತಾಯಿಯೇ ಜನ್ಮ ನೀಡಿರುವಳೋ ಇದರೊಡನೆ ಶಿವನಿಗೆ ಮಾತ್ರ ಯುದ್ಧ ಮಾಡಿ ಗೆಲ್ಲಲು ಸಾಧ್ಯ ಉಳಿದವರಿಗೆ ಸಾಧ್ಯವಿಲ್ಲ ಎಂದಾಗ ಅರ್ಜುನ ರಥವನ್ನು ಕೌರವ ಸೈನ್ಯದ ಸಮೀಪಕ್ಕೆ ತಂದನು. ಉತ್ತರಕುಮಾರನು ಹೆದರುತ್ತ ಕೊಂದನೀ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಸಾರಥಿ ಎಂದು ರಥದಿಂದ ಇಳಿದು ಓಡಲು ಯತ್ನಿಸುತ್ತಾನೆ. ಆಗ ಅರ್ಜುನ ಮನಸ್ಸು ಬಿಚ್ಚಿ ನಗುತ ತುಂಬಿದ ಸಭೆಯಲ್ಲಿ ಹೆಂಗಳೆಯರ ಮುಂದೆ ಬಾಯ್ಗೆ ಬಂದಂತೆ ಜಂಭ ಕೊಚ್ಚಿಕೊಂಡೆಯಲ್ಲಾ ಈಗ ಯುದ್ಧ ಮಾಡದೇ ಊರಿನ ನರಿಯಂತೆ ಹಲ್ಲು ಗಿರಿದರೆ ಬಿಡುವೆನೆ ಯುದ್ಧ ಮಾಡು ಎನ್ನುತ್ತಾನೆ. ಉತ್ತರ ಕುಮಾರನು ಯುದರಂಗದಿಂದ ಓಡಿದ ಪಾಪವನ್ನು ಬ್ರಾಹ್ಮಣರು ಮಾಡುವ ಯಜ್ಞಯಾಗದಿಂದ ಪರಿಹರಿಸಬಹುದು. ಅಶ್ವಮೇಧ ಯಾಗವನ್ನು ಮಾಡಬಹುದು ದೇವಲೋಕದ ಅಪ್ಸರ ಸ್ತ್ರೀಯರು ಬೇಡ ನಮಗೆ ಅರಮನೆಯ ಸ್ತ್ರೀಯರೇ ಸಾಕು. ನಮಗೆ ಅರಮನೆಯ ಸಿಂಹಾಸನವೇ ಸಾಕು ಇಂದ್ರ ಪದವಿ ಬೇಡ ಎಂದು ಉತ್ತರನು ರಣರಂಗದಲ್ಲಿ ಕುರುಸೇನೆ ನೋಡಿ ಹೆದರುತ್ತಾ ಹೇಳುತ್ತಾನೆ. ಇದು ಅರ್ಜುನ ಮತ್ತು ಉತ್ತರ ಇವರ ಸಂಭಾಷಣೆಯ ಸ್ವಾರಸ್ಯವಾಗಿದೆ. | |
| | ***ಅಥವಾ*** | |
| | ಅರ್ಜುನ ಮತ್ತು ಉತ್ತರ ಕುಮಾರನ ಗುಣ ಸ್ವಭಾವದಲ್ಲಿ ಅಜಗಜಾಂತರ ವ್ಯತ್ಯಾಸ ಕಂಡುಬರುತ್ತದೆ. ಶೌರ್ಯವಿಲ್ಲದೆ ಬಡಾಯಿ ಕೊಚ್ಚಿಕೊಳ್ಳುವವರನ್ನು ಉತ್ತರಕುಮಾರನೆಂದು ಕರೆಯುತ್ತಾರೆ. ಉತ್ತರಕುಮಾರನು ನನ್ನ ಸಾಮರ್ಥ್ಯಕ್ಕೆ ತಕ್ಕನಾದ ಒಬ್ಬ ಒಳ್ಳೆಯ ಸಾರಥಿ ಸಿಕ್ಕಿದ್ದರೆ ಕುರುಸೈನ್ಯವನ್ನು ಬಗ್ಗುಬಡಿದು ಗೋವುಗಳನ್ನು ಬಿಡಿಸಿ ತರುತ್ತಿದ್ದೆ ಎಂದು ಹೆಂಗಳೆಯರ ಮುಂದೆ ಜಂಭ ಕೊಚ್ಚಿಕೊಳ್ಳುತ್ತಾನೆ. ಆದರೆ ಕೌರವ ಸೇನೆಯನ್ನು ನೋಡಿ ಹೆದರುತ್ತ ರಥದಿಂದ ಇಳಿದು ಓಡಲು ಯತ್ನಿಸುತ್ತಾನೆ. ಬರಿಯ ಬಾಯಿ ಬಡಿವಾರ ತೋರಿ ನಗೆ ಪಾಟಲಿಗೆ ಒಳಗಾಗುತ್ತಾನೆ. ಆದರೆ ಅರ್ಜುನ ಬೃಹನ್ನಳೆಯ ವೇಷದಲ್ಲಿದ್ದರು, ಶೌರ್ಯವನ್ನು ಪ್ರದರ್ಶಿಸಿ ರಥವನ್ನು ಶತ್ರು ಸೈನ್ಯದ ಮುಂದಕ್ಕೆ ತಂದು ನಿಲ್ಲಿಸಿ ಯುದ್ಧ ರಂಗದಿಂದ ಓಡುತ್ತಿದ್ದ ಉತ್ತಂಕುಮಾರನನ್ನು ಹಿಡಿದು ತಂದು ಅವನಿಗೆ ಧೈರ್ಯ ತುಂಬಿ ತಾನೇ ಯುದ್ಧಕ್ಕೆ ನಿಲ್ಲುತ್ತಾನೆ. ನಗೆಪಾಟಲಿಗೆ ಒಳಗಾಗುವ ಬದಲು ಕಾರ್ಯ ಮಾಡಿ ಶೂರನೆನಿಸಿಕೊಳ್ಳುತ್ತಾನೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಅಪಠಿತ ಗದ್ಯ :** (ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿಯುತ್ತರಕ್ಕೆ ಒಂದು ಅಂಕ) | 4 × 1 = 4 |
| | ಪುರಂದರದಾಸರು ಕ್ರಿ.ಶ. ಹದಿನಾರನೆಯ ಶತಮಾನದಲ್ಲಿ ಬಾಳಿದವರು. ಆಗರ್ಭ ಶ್ರೀಮಂತರಾಗಿದ್ದ ಇವರು ಯಾವುದೋ ಒಂದು ಸನ್ನಿವೇಶದಲ್ಲಿ ವೈರಾಗ್ಯವನ್ನು ತಾಳಿ ಹರಿದಾಸರಾದರೆಂಬ ಪ್ರತೀತಿಯಿದೆ. ಇವರ ಮೊದಲಿನ ಹೆಸರು ಕೃಷ್ಣಪ್ಪನಾಯಕ ಅಥವಾ ವರದಪ್ಪನಾಯಕ ಅಥವಾ ಶ್ರೀನಿವಾಸನಾಯಕ ಎಂದು ಬೇರೆ ಬೇರೆಯಾಗಿ ಪ್ರಚಲಿತವಾಗಿದೆ. ಇವರು ಕೀರ್ತನೆಗಳನ್ನಲ್ಲದೆ ಸುಳಾದಿ, ಉಗಾಭೋಗಗಳನ್ನೂ ರಚಿಸಿದ್ದಾರೆ. ಹರಿನಾಮಸ್ಮರಣೆ, ಅಂತರಂಗ ನಿವೇದನೆ, ಕೃಷ್ಣಲೀಲೆ, ಸಮಾಜ ವಿಮರ್ಶೆ ಹೀಗೆ ಇವರ ಕೀರ್ತನೆಗಳ ವಸ್ತು ವೈವಿಧ್ಯಮಯವಾಗಿದೆ. ಲಕ್ಷಾಂತರ ಕೀರ್ತನೆಗಳನ್ನು ಬರೆದಿರುವರೆಂಬ ನಂಬಿಕೆಯಿದ್ದರೂ ಸಿಕ್ಕಿರುವ ಇವರ ರಚನೆಗಳು ಸುಮಾರು ಒಂದು ಸಾವಿರ. ಕರ್ನಾಟಕ ಸಂಗೀತದ ಬುನಾದಿಯಾದ ಪಿಳ್ಳಾರಿ ಗೀತೆಗಳನ್ನು ಪುರಂದರದಾಸರು ಬರೆದಿದ್ದಾರೆ. ಆದ್ದರಿಂದ ಸಂಗೀತ ಪ್ರಿಯರು ಇವರನ್ನು 'ಕರ್ನಾಟಕ ಸಂಗೀತ ಪಿತಾಮಹ' ಎಂದು ಕರೆಯುತ್ತಾರೆ. 'ದಾಸರೆಂದರೆ ಪುರಂದರದಾಸರಯ್ಯ' ಎಂದು ತಮ್ಮ ಗುರು ವ್ಯಾಸರಾಯರಿಂದ ಹೊಗಳಿಸಿಕೊಂಡ ಭಕ್ತ ಶ್ರೇಷ್ಠರು. | |
| 39. | ಪುರಂದರದಾಸರನ್ನು ಸಂಗೀತ ಪ್ರಿಯರು ಏನೆಂದು ಕರೆಯುತ್ತಾರೆ ?<br>***ಉತ್ತರ :***<br>ಪುರಂದರದಾಸರನ್ನು ಸಂಗೀತ ಪ್ರೀಯರು ಕರ್ನಾಟಕ ಸಂಗೀತ ಪಿತಾಮಹ ಎಂದು ಕರೆಯುತ್ತಾರೆ. | |
| 40. | ಪುರಂದರದಾಸರು ಎಷ್ಟನೇ ಶತಮಾನದಲ್ಲಿ ಬಾಳಿದವರು ?<br>***ಉತ್ತರ :***<br>ಪುರಂದರದಾಸರು ಕ್ರಿ.ಶ. ಹದಿನಾರನೆಯ ಶತಮಾನದಲ್ಲಿ ಬಾಳಿದವರು. | |
| 41. | ಪುರಂದರದಾಸರಿಗೆ ಪ್ರಚಲಿತವಾಗಿರುವ ಬೇರೆ ಬೇರೆ ಹೆಸರುಗಳಾವುವು ?<br>***ಉತ್ತರ :***<br>ಕೃಷ್ಣಪ್ಪನಾಯಕ ಅಥವಾ ವರದಪ್ಪನಾಯಕ ಅಥವಾ ಶ್ರೀನಿವಾಸನಾಯಕ ಇವು ಪುರಂದರದಾಸರಿಗೆ ಪ್ರಚಲಿತವಾಗಿರುವ ಬೇರೆಬೇರೆ ಹೆಸರುಗಳಾಗಿವೆ. | |
| 42. | ಪುರಂದರದಾಸರ ಗುರುಗಳು ಯಾರು ?<br>***ಉತ್ತರ :***<br>ವ್ಯಾಸರಾಯರು ಪುರಂದರದಾಸರ ಗುರುಗಳು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಬಿ'** | |
| | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 12 × 1 = 12 |
| 43. | 'ಜ್ಞಾನ' ಈ ಪದದ ವಿರುದ್ಧಾರ್ಥಕ ಪದ<br>(ಎ) ವಿಜ್ಞಾನ (ಬಿ) ಅಜ್ಞಾನ<br>(ಸಿ) ಪರಿಜ್ಞಾನ (ಡಿ) ಸುಜ್ಞಾನ<br>***ಉತ್ತರ :*** (ಬಿ) ಅಜ್ಞಾನ | |
| 44. | 'ಹೆಜ್ಜೇನು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ<br>(ಎ) ದ್ವಿಗು ಸಮಾಸ (ಬಿ) ಅಂಶಿ ಸಮಾಸ<br>(ಸಿ) ದ್ವಂದ್ವ ಸಮಾಸ (ಡಿ) ಕರ್ಮಧಾರಯ ಸಮಾಸ<br>***ಉತ್ತರ :*** (ಡಿ) ಕರ್ಮಧಾರಯ ಸಮಾಸ | |
| 45. | 'ಪುಸ್ತಕದಲ್ಲಿ' ಈ ಪದದ ವಿಭಕ್ತಿ<br>(ಎ) ಸಪ್ತಮೀ (ಬಿ) ಪ್ರಥಮಾ<br>(ಸಿ) ಷಷ್ಠೀ (ಡಿ) ದ್ವಿತೀಯಾ<br>***ಉತ್ತರ :*** (ಎ) ಸಪ್ತಮೀ | |
| 46. | 'ವನಜಮುಖಿ' ಪದ ಈ ಅಲಂಕಾರಕ್ಕೆ ಉದಾಹರಣೆಯಾಗಿದೆ<br>(ಎ) ಉಪಮಾಲಂಕಾರ (ಬಿ) ಶಬ್ದಾಲಂಕಾರ<br>(ಸಿ) ರೂಪಕಾಲಂಕಾರ (ಡಿ) ದೃಷ್ಟಾಂತಾಲಂಕಾರ<br>***ಉತ್ತರ :*** (ಸಿ) ರೂಪಕಾಲಂಕಾರ | |
| 47. | 'ಕಟ್ಟಕಡೆ' ಎಂಬುದು ಇದಕ್ಕೆ ಉದಾಹರಣೆ<br>(ಎ) ಅನುಕರಣಾವ್ಯಯ (ಬಿ) ಜೋಡುನುಡಿ<br>(ಸಿ) ಸರ್ವನಾಮ (ಡಿ) ದ್ವಿರುಕ್ತಿ<br>***ಉತ್ತರ :*** (ಡಿ) ದ್ವಿರುಕ್ತಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 48. | 'ವರ್ಷ' ಪದದ ತದ್ಭವರೂಪ ಪದ<br>(ಎ) ಹರುಷ (ಬಿ) ವರುಷ<br>(ಸಿ) ಬರ್ಷ (ಡಿ) ಸ್ಪರ್ಶ<br>***ಉತ್ತರ :*** (ಬಿ) ವರುಷ | |
| 49. | 'ಮಹಾನುಭಾವ' ಪದವು ಈ ಸಂಧಿಗೆ ಉದಾಹರಣೆಯಾಗಿದೆ<br>(ಎ) ಸವರ್ಣದೀರ್ಘ ಸಂಧಿ (ಬಿ) ಯಣ್ ಸಂಧಿ<br>(ಸಿ) ಅನುನಾಸಿಕ ಸಂಧಿ (ಡಿ) ವೃದ್ಧಿ ಸಂಧಿ<br>***ಉತ್ತರ :*** (ಎ) ಸವರ್ಣದೀರ್ಘ ಸಂಧಿ | |
| 50. | 'ಮುಡುಪು' ಈ ಪದದ ಅರ್ಥ<br>(ಎ) ಕಣ್ಣೀರು (ಬಿ) ಮನಸ್ಸು<br>(ಸಿ) ಮೀಸಲು (ಡಿ) ಬಂಗಾರ<br>***ಉತ್ತರ :*** (ಸಿ) ಮೀಸಲು | |
| 51. | ತ್ರಿಪದಿ ಪದ್ಯದಲ್ಲಿರುವ ಸಾಲುಗಳ ಸಂಖ್ಯೆ<br>(ಎ) ಮೂರು (ಬಿ) ಆರು<br>(ಸಿ) ಐದು (ಡಿ) ನಾಲ್ಕು<br>***ಉತ್ತರ :*** (ಎ) ಮೂರು | |
| 52. | 'ಕತ್ತಿಮಸೆ' ಎಂಬುದು ಇದಕ್ಕೆ ಉದಾಹರಣೆ<br>(ಎ) ದ್ವಿರುಕ್ತಿ (ಬಿ) ಜೋಡುನುಡಿ<br>(ಸಿ) ಅನುಕರಣಾವ್ಯಯ (ಡಿ) ನುಡಿಗಟ್ಟು<br>***ಉತ್ತರ :*** (ಡಿ) ನುಡಿಗಟ್ಟು | |
| 53. | ಕನ್ನಡ ವರ್ಣಮಾಲೆಯಲ್ಲಿರುವ ಅನುನಾಸಿಕ ಅಕ್ಷರಗಳ ಸಂಖ್ಯೆ<br>(ಎ) ಹದಿಮೂರು (ಬಿ) ಇಪ್ಪತ್ತೈದು<br>(ಸಿ) ಐದು (ಡಿ) ಹತ್ತು<br>***ಉತ್ತರ :*** (ಸಿ) ಐದು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 54. | 'ಬಡಗಣ' ಪದವು ಈ ನಾಮಪದಗಳ ಗುಂಪಿಗೆ ಸೇರುತ್ತದೆ<br>(ಎ) ಸಂಖ್ಯಾವಾಚಕ (ಬಿ) ದಿಗ್ವಾಚಕ<br>(ಸಿ) ಗುಣವಾಚಕ (ಡಿ) ಭಾವನಾಮ<br>***ಉತ್ತರ :*** (ಬಿ) ದಿಗ್ವಾಚಕ | |
| 55. | **ಗಾದೆಯನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)**<br>* ತಾಯಿಗಿಂತ ಬಂಧುವಿಲ್ಲ; ಉಪ್ಪಿಗಿಂತ ರುಚಿಯಿಲ್ಲ<br>* ಬೆಳೆಯುವ ಸಿರಿ ಮೊಳಕೆಯಲ್ಲಿ<br>* ಶಕ್ತಿಗಿಂತ ಯುಕ್ತಿ ಮೇಲು<br>***ಉತ್ತರ :*** | 1 × 3 = 3 |
| | ಗಾದೆಯ ಮಹತ್ವದ ವಿವರಣೆ | 1 ಅಂಕ |
| | ಗಾದೆಯ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 56. | **ಪತ್ರ ಲೇಖನ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)**<br>ನಿಮ್ಮನ್ನು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ಶಾರದಾ ಪ್ರೌಢಶಾಲೆಯ 'ವಿನಾಯಕ' ಎಂದು ಭಾವಿಸಿಕೊಂಡು, 'ಶಾಲೆಯ ವಾರ್ಷಿಕೋತ್ಸವಕ್ಕೆ ಬರುವಂತೆ ಆಹ್ವಾನಿಸಿ ಹಾಸನ ಜಿಲ್ಲೆ ಬೆಳಗೊಳದ ನೃಪತುಂಗ ಪ್ರೌಢಶಾಲೆಯ 'ಸುರೇಶ' ಎಂಬ ಗೆಳೆಯನಿಗೆ ಪತ್ರವೊಂದನ್ನು ಬರೆಯಿರಿ.<br>***ಅಥವಾ***<br>ನಿಮ್ಮನ್ನು ಬೆಳಗಾವಿಯ ಸರ್ಕಾರಿ ಪ್ರೌಢಶಾಲೆಯ 'ಅನುಶ್ರೀ' ಎಂದು ಭಾವಿಸಿಕೊಂಡು, ಅಕ್ಕನ ಮದುವೆಯಲ್ಲಿ ಭಾಗವಹಿಸುವ ಕಾರಣ ನೀಡಿ ಮೂರು ದಿನಗಳ ರಜೆ ನೀಡುವಂತೆ ಶಾಲೆಯ ಮುಖ್ಯೋಪಾಧ್ಯಾಯರಿಗೊಂದು ಮನವಿ ಪತ್ರ ಬರೆಯಿರಿ.<br>***ಉತ್ತರ :***<br>ವೈಯಕ್ತಿಕ ಪತ್ರ : | 1 × 4 = 4 |
| | ಇಂದ ವಿಳಾಸ, ಸ್ಥಳ, ದಿನಾಂಕ, ಪ್ರಾರಂಭದ ಒಕ್ಕಣೆ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಗೆ ವಿಳಾಸ | 1 ಅಂಕ |
| | ಒಟ್ಟು | 4 ಅಂಕಗಳು |
| | ***ಅಥವಾ*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ವ್ಯಾವಹಾರಿಕ ಪತ್ರ : | |
| | ಇಂದ ವಿಳಾಸ, ಗೆ ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಸ್ಥಳ, ದಿನಾಂಕ | 1 ಅಂಕ |
| | ಒಟ್ಟು | 4 ಅಂಕಗಳು |
| 57. | **ಪ್ರಬಂಧ ಬರೆವಣಿಗೆ : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 4 = 4 |
| | * ಮಹಿಳಾ ಜಾಗೃತಿ | |
| | * ಕ್ರೀಡೆಗಳ ಮಹತ್ವ | |
| | * ಸ್ವಚ್ಛ ಭಾರತ ಆಂದೋಳನದಲ್ಲಿ ಯುವ ಜನತೆಯ ಪಾತ್ರ | |
| | ***ಉತ್ತರ :*** | |
| | ಪೀಠಿಕೆ / ಪ್ರಸ್ತಾವನೆ | 1 ಅಂಕ |
| | ವಿಷಯ ನಿರೂಪಣೆ, ಭಾಷಾಶೈಲಿಗೆ | 2 ಅಂಕಗಳು |
| | ಮುಕ್ತಾಯ / ಉಪಸಂಹಾರ | 1 ಅಂಕ |
| | ಒಟ್ಟು | 4 ಅಂಕಗಳು |